ತಾರೀಖು 17ನೇ ಮಾರ್ಚಿ 1890.

ಇದರಿಂದ ಘೋಷಿಸ್ ಮಾಡುವದೇನಂದರೆ, ಸಾಗರ ತಾಲ್ಲೂಕು ಕಾರೂರು ಮಾಗಣಿ ಕೇಕದಾರ್ ಚಿನ್ನದ ಹೊಳೀ ದಾಟುವ ವೇಳೆ ನಂ ಬರ್ ಯಿಲ್ಲದ F ಯೆಂದು ಗುರ್ತುವುಳ್ಳ ಠಸ್ಸೆ ಮೊಪರ್ ಕಳಕೊಂಡಹಾಗೆ ತಿಳಿದು ಬಂದು ಯಿರುವದ್ದರಿಂದ ಅದಕ್ಕೆ ಬದಲಾಗಿ ಬೇರೆ ಬಂ ದು ಹೊಸ ಮೊಹರ್ ಕೊಡಲ್ಪಟ್ಟಿರುತ್ತೆ.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 17—2—90ರಲ್ಲು—ರಾಜೆಬೆನ್ನೂರು ಮತ್ತು ಶಿವನೆ ರೈಲ್‌ವೆ ಸ್ಟೇಷ್‌ನ್‌ಗಳ ನುಧ್ಯೆ ಶ್ರೀನಿವಾಸ ರಾಯರೆಂಬವರ ಕಳವಾದ ಮಾಲಿನವಿವರ.

		ರೂ.	ಆ.	ಪೈ.
(1)	ಬಳ್ಳಿ ದೊಡ್ಡ ಮುತ್ತು 10 ಸಂಣ ಮುತ್ತು 8 ಹಾಕಿದ ಚಿನ್ನದ ಮುಖರ 1ಕ್ಕೆ ..	150	0	0
(2)	ಸುವರ್ಣ 7½ ತೊಲೆ ವುಳ್ಳ ಭಂಗಾರದ ಗೀರುಬಳೆ 2ಕ್ಕೆ	150	0	0
(3)	ಚಿನ್ನದ ಸರಪಣಿ ಮತ್ತು ಕೀವೆ ಮುತ್ತು ಹಾಕಿದ ಬುಗಡಿ ಝೂಲರಿ 2ಕ್ಕೆ ..	10	0	0
(4)	ಚಿನ್ನದ ಗೂಬಿಬಾಳಾಕೀಬಿ ಮುತ್ತು ಸುತ್ತಿಯಿತ್ತು	5	0	0
(5)	ಚಿನ್ನದ ಅರಳಿಲೆ ಕೆಂಪುಹಾಕಿ ಕೀಬಿ ಮುತ್ತು ಸುತ್ತಿದ ಬಾಬತು 1ಕ್ಕೆ ..	5	0	0
(6)	ಹುಡುಗಳ ಬೆಳ್ಳಿಕಾಲುಗೆಜ್ಜೆ ಜೊತೆ 1ಕ್ಕೆ	10	0	0
(7)	ಬೆಳ್ಳಿ ಪಾಡಗ ಜೊತೆ 1ಕ್ಕೆ	5	0	0
(8)	ಬೆಳ್ಳಿಕಾಲುಂಗರ ಜೊತೆ 1ಕ್ಕೆ	8	0	0
(9)	ತರಜೇವಾದ ದೇಶಿಕುಪನದ ಖಣಗಳು 6ಕ್ಕೆ	5	0	0
	ಜುಮ್ಲಾ	348	0	0

ತಾರೀಖು 5—3—1890ನೇ ಇಸವಿ ಬೆಂಗಳೂರು

ಸಿ. ಹಾರ್ಡಿ,
ರೈಲ್ವೆ ಪೊಲೀಸ್ ಆ|| ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 9ನೇ ಮಾರ್ಚಿ 1890.

ಇಸ್ತಿಹಾರ್‌ನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದಿರಡಿ ನಮೂದಾಗುವ ತಾಲ್ಲೂಕುಗಳಲ್ಲಿ ಕುರಂಗದ ಕಲ್ಲು ಜಮಾ ಯಿಸತಕ್ಕ ಹಕ್ಕನ್ನು 1890ನೇ ಇಸವಿ ಮಾರ್ಚಿ ತಾರೀಖು 31ರಲ್ಲು ಆಯಾಯ ತಾಲ್ಲೂಕು ಕಚೇರಿಯಲ್ಲಿ ಹರಾಜು ಮೂಲಕ ವಿಕ್ರ ಯಿಸಲ್ಪಡುತ್ತೆ. ಹರಾಜು ದಿವಿ 11 ಘಂಟೆಗೆ ಆರಂಭಿಸಲ್ಪಡುವದು.

ಬವರಿಂಗ್‌ಪೇಟೆ, ಶಿಡ್ಲಘಟ್ಟ, ಗೋರೀಬಿದನೂರು.

2. ಅಮಲ್‌ದಾರು ಅಥವಾ ಶಿರಸ್ತೇದಾರು ಹರಾಜು ಮಾಡಿಸುತ್ತಾರೆ.
3. ಚಡ ಸವಾಲ್ ಅಂಗೀಕರಿಸತಕ್ಕದ್ದು ಮೈಸೂರು ದಿವಾ ನ್ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.
4. ಇಜಾರೆ 1891ನೇ ಇಸವಿ ಮಾರ್ಚಿ 31ನೇ ತಾರೀಖಿನ ವರಿಗೆ ಜಾರೀಲಿ ಯಿರುವದು.
5. ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು, ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆ ಹಾಜರ್ಮಾಡಬೇಕು, ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.
6. ಚಡ ಸವಾಲ್‌ದಾರನು ಹರಾಜ್ ಕಾಲದಲ್ಲಿ ತನ್ನ ಸವಾಲ್ ಮೊಬಲಗು ವೈಕಿ ಕೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ ಹಾಜರ್ಮಾಡಬೇಕು. ಹರಾಜು ಮಂಜೂರಾದ ಸಂಗತಿ ಅಮಲ್‌ದಾರ್ರಿಂದ ತಿಳಿಸಲ್ಪಟ್ಟ ಲಾಗಾಯತು 7 ದಿವಸಗಳ ವಳಗಾಗಿ ಬಾಕಿ ಮೊಬಲಗನ್ನು ಮತ್ತು ಚಡ ಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಅಣೆ ಮೇರಿಗೆ ಕೋಕಲ್‌ಸೆಸ್ ಸಹ ಹಾಜರ್ಮಾಡಬೇಕು, ಇದಕ್ಕೆ ತಪ್ಪಿದರೆ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವ ದು, ಡಿಪಾಜಿಟ್ ಹಾಜರ್ಮಾಡದೆ ಯಿದ್ದಾಗ್ಯೂ ಅಥವಾ ಬಾಕಿ ಮೊಬಲಗು ಪೂರ್ತಿ ಮಾಡದೆ ಯಿದ್ದಾಗ್ಯೂ ಈ ಬಾಬು ಪುನಹ ಹರಾಜ್ ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಚಡ ಸವಾಲ್‌ದಾರನು ಗುರಿಮಾಡಲ್ಪಡುವದು.

7. ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾಯ ಹಿಡುವಳಿದಾರ್ರ ಅನುಮತಿ ವಿನಹಾ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರ ವಿನಹಾ ಇತರರಿಗೆ ಮಾರುವದಕ್ಕೆ ಆಗಲಿ ಹಿಡುವಳಿದಾರ್ರಿಗೆ ಅಧಿಕಾರ ವಿರುವದಿಲ್ಲ.

8. ಇಜಾರೆದಾರನು ಹುಲ್ಲುಬನ್ನಿ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆಟಂಕ ಪಡಿಸಕೂಡದು.

9. ಹಿಡುವಳೀಲಿ ಯಿಲ್ಲದ ಜಮೀನುಗಳನ್ನ ಸರ್ಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರ ವೇನೂ ಯಿರುವದಿಲ್ಲ, ಪರಂತು ಅಂಥಾ ಜಮೀನುಗಳಲ್ಲಿ ಕಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕ್ಕೊಳ್ಳಲು ಅವನಿಗೆ ಹಕ್ಕು ಯಿರುತ್ತೆ.

10. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರನು ಆಗಿಯಕೂಡದು, ಬಂದು ವ್ಯಾಳೆ ಆಗದರೆ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

ಯೆ. ಕುಪ್ಪುಸಾಮಿ ಮೊದಲಿಯಾರ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ತುಮಕೂರು ಡಿವೀರ್ಜ.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಯಿದರಿಂದ ತಿಳಿಯಪಡಿಸುವದೇನಂದರೆ, ಪಾವಗಡ ತಾಲ್ಲೂಕು ಬೊಮ್ಮಗೋನಹಳ್ಳಿ ತಲಾವು ರಿಪೇರಿ ಕಾಮುಗಾರಿಗಾಗಿ ಮೊಹರಾಗಿ ಬರುವ ದರಖಾಸ್ತುಗಳನ್ನು ತುಮಕೂರು ಡಿವೀರ್ಜ ಯಗ್ಜಿಕ್ಯೂಟಿವ್ ಇಂಜಿನಿಯರವರ ಆಫಿಸಿನಲ್ಲಿ ಸಾಲ್ ಮುಜಕೂರು 1890ನೇ ಇಸವಿ ಮಾರ್ಚೀ ಆಖೈರುವರಿವಿಗೆ ಹಿಡಿಯಲ್ಪಡುವದು.

ಸುಮಾರು ಅಂದಾಜಾ ಪರಮಾಣವನ್ನು ಈ ಕೆಳಗೆ ನಮೂದಿಸಿಯಿಧೆ. ಈ ಪರಿಮಾಣವು ಗೊತ್ತಾದ್ದಲ್ಲ, ಕಾಮುಗಾರಿಯು 1891ನೇ ಇಸವಿ ಸೆಪ್ಟಂಬರ್ ಆಖೈರು ವಳಗಾಗಿ ಪೂರೈಸತಕ್ಕದ್ದು.

2. ಸರ್ವೆ ಅಂದಾಜಾ ಮತ್ತು ಪರತ್ತು ಇತರ ಸಂಗತಿಗಳನ್ನು ಸಹ ದಿವಿ 11 ಘಂಟೆ ಲಾಗಾಯಿತು 5 ಘಂಟೆವರಿವಿಗೆ ತುಮಕೂರು ಡಿವೀರ್ಜ ಯಗ್ಜಿಕ್ಯೂಟಿವ್ ಇಂಜನೀಯರ ಆಫಿಸಿನಲ್ಲಿ ನೋಡಬಹುದು.

3. ದರಖಾಸ್ತುಗಳು ಅಚ್ಚಿನ ನಮೂನೆಯಲ್ಲಿ ಯಿರಬೇಕು. ಈ ನಮೂನೆಯನ್ನು ಯಗ್ಜಿಕ್ಯೂಟಿವ್ ಇಂಜನೀಯರವರ ಆಫಿಸಲ್ಲಿ ಪಡೆಯಬಹುದು, ಖಾಬುವಾರ್ ಕೆಲಸವನ್ನ ಯಾವ ಯಾವ ದರದಲ್ಲಿ ನಡೆಯಲ್ಪಡುವದೊ ಅದನ್ನು ತೋರಿಸಿ ಕೆಳಗೆ ಕೊಟ್ಟಿರುವ ಫಾರಮಿನಂತೆ ಬಂದು ಪಟ್ಟೀ ತಯಾರಿಯಿಂದ ದರಖಾಸ್ತು ನೊಡನೆ ಕಳುಹಿಸಿ ಕೊಡಬೇಕು.

4. ಪ್ರತಿ ದರಖಾಸ್ತುಗಳು ಪ್ರೊನೋಟು ಮೂಲಕವಾಗಲಿ ವ ನಗದಾಗಲಿ 200 ರೂಪಾಯಿ ಡಿಪಾಜಿಟ್ಟನ್ನ ವಡಗೂಡಿ ಯಿರಬೇಕು. ಮತ್ತು "ಪಾವಗಡ ತಾಲ್ಲೂಕು ಬೊಮ್ಮಗೋನಹಳ್ಳಿ ತಲಾವು ರಿಪೇರಿ ಕಾಮುಗಾರಿ ದರಖಾಸ್ತು" ಯಂತ ಲಿಫಾಫೆ ಮೇಲೆ ಬರದು ಇರಬೇಕು. ಹೀಗೆ ಇಲ್ಲದೆ ಬರುವ ದರಖಾಸ್ತುಗಳನ್ನ ತಿರಸ್ಕರಿಸಲ್ಪಡುವವು.

5. ಪ್ರತಿ ದರಖಾಸ್ತನ್ನ ಅಂಗೀಕರಿಸತಕ್ಕದ್ದು ಚೀಫ್ ಇಂಜಿನೀಯರ್ ಸಾಹೆಬರವರದಾಗಿ ಯಿಧೆ. ಅವರು ಕಮ್ಮಿ ದರ ವ ಇತರ ದರಖಾಸ್ತನ್ನು ಮಂಜೂರ್ಮಾಡುವದಕ್ಕೆ ವ ದರಖಾಸ್ತನ್ನು ಅನಂಗೀಕರಿಸುವದಕ್ಕೆ ಕಾರಣವನ್ನು ಹೇಳುವದಕ್ಕೆ ಬದ್ಧರಾಗಿ ಯಿರುವದಿಲ್ಲ.

6. ದರಖಾಸ್ತು ಮಂಜೂರ್ಮಾಡಿದ 8 ರೋಜುಗಳವಳಗಾಗಿ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡೆನ್ನು ಬರದುಕೊಡತಕ್ಕದ್ದು ಅವಶ್ಯಕವಾಗಿಯಿಧೆ. ಹೀಗೆ ಮಾಡದಿರುವ ಸಂದರ್ಭದಲ್ಲಿ ದರಖಾಸ್ತು ರದ್ದುಆದ ಹಾಗೆ ಭಾವಿಸಲ್ಪಡುವದಲ್ಲದೆ ದರಖಾಸ್ತುದಾರನು ತನ್ನ ಡಿಪಾಜಿಟ್ ಮೊಬಲಗನ್ನ ಹೋಗಲಾಡಿಸಿಕೊಳ್ಳುವನು.

7. ಯಾರ ದರಖಾಸ್ತು ಮಂಜೂರ್ಮಾಡಲ್ಪಡುವದೋ ಅಂಥಾ ದರಖಾಸ್ತುದಾರನ ಹೆಸರನ್ನು ಯಗ್ಜಿಕ್ಯೂಟಿವ್ ಇಂಜನೀಯ್ ರವರ ಆಫಿಸ್ ನೋಟಿಸ್ ಬೋರಡಿನಲ್ಲಿ ಐಯಿಂದ ಚಿಕಟ್ಟುಯಿಸಲ್ಪಡುವದು, ದರಖಾಸ್ತು ಮಂಜೂರಾಯಿತೆ ವ ಆನಂಗೀಕರಿಸಲ್ಪಟ್ಟಿತೆ ಯಂದು ಬರುವ ಪ್ರಶ್ನೆಗಳಿಗೆ ಜವಾಬು ಬರಿಯಲಾರದು.

8. ದರಖಾಸ್ತುಗಳ ಪೈಕಿ ಬಂದು ದರಖಾಸ್ತು ಮಂಜೂರಾದ ಕೂಡ್ಲೆ ಅನಂಗೀಕಾರವಾದ ದರಖಾಸ್ತುಗಳ ಡಿಪಾಜಿಟ್ ಹಣವು ವಾಪಸು ಮಾಡಲ್ಪಡುವದು.